ಕವಿತೆ




## ರಾಧೇಶ ತೋಳ್ಪಾಡಿ

ಕಲೆ: ಸಂತೋಷ್ ಸಸಿಹಿತ್ಲು




# ಬೆಟ್ಟ ಯಾಕೆ ಬೆಟ್ಟ ಗೊತ್ತಾ

ಬೆಟ್ಟ ಯಾಕೆ ಬೆಟ್ಟ ಗೊತ್ತಾ
ನೋಡು ಅದರ ಎತ್ತರ
ಎಂಥ ನಿಲುವು! ಏನು ದೃಢತೆ!
ನಿಲುಕದದರ ಬಿತ್ತರ!

ಹಕ್ಕಿಗಳಿಗೆ ಹತ್ತು ದಿಕ್ಕು
ತೋರಲಿಕ್ಕೆ ನಿಂತಿದೆ!
ತನ್ನ ಬೆನ್ನ ಹಿಂದಿನಿಂದ
ರವಿಯನೆತ್ತಿದಂತಿದೆ!

ಬಾನು ಮುಟ್ಟುವಾಸೆ ಅದಕೆ
ನೀಲಿ ಕೆನ್ನೆ ಸವರಲು!
ಓಡುವಂಥ ಮೋಡ ತಡೆದು
ಅದರ ಕೈಯ ಕುಲುಕಲು!

ಚುಕ್ಕಿ ಪಾರಿಜಾತ ಹೂವ
ಮಕ್ಕಳಿಂಗೆ ಮುಡಿಸುತ
ಚಂದ್ರ ಗೋವ ಕೆಚ್ಚಲಿಂದ
ಅಚ್ಚ ಹಾಲು ಹರಿಸುತ

ನೋಟ ಬಾನಿಗಾದರೂನೂ
ನಿಂತ ನೆಲವೇ ಅಕ್ಕರೆ!
ಏನು ಹಿಗ್ಗು! ಎಂಥ ಹೆಮ್ಮೆ!
ಹಸಿರು ಹೊಲವು ನಕ್ಕರೆ!

ತನ್ನ ಬಂಡೆ ಮಕ್ಕಳನ್ನು
ದಿನವೂ ಗಟ್ಟಿಯಾಗಿಸಿ
ಬಿಸಿಲು ಮಳೆಯ ಗೆಳೆಯರಂತೆ
ಕಾಣಿರೆಂದು ಪಾಠಿಸಿ

ಬೆಟ್ಟ,ಮನದ ಕೊಳೆಯು ಕಳೆವ
ಬಗೆಯನೆಂತು ಹೇಳಲಿ?
ಇಂಥ ಸಂತನಂಥ ಜೀವ
ನೂರು ಕಾಲ ಬಾಳಲಿ!

ನಿಜಕೂ ಹುಲ್ಲಿನೆಸಳೇ ಧನ್ಯ
ಕುಡಿದು ಕರುಣೆ ಜಲವನು
ಬೆಟ್ಟ ಯಾಕೆ ಬೆಟ್ಟ ಗೊತ್ತಾ
ಪಡೆದು ನೋಡು ಒಲವನು!

ಒಲವೇ ಗೆಲುವ ಚೆಲುವನು!
ಒಲವಿಗಿರುವ ಬಲವನು!


Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220,


© All rights reserved. Reproduction in whole or in part without permission is prohibited.


RNI No 17129/68